## <u>ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ</u>

<u>ಸಿ.ಸಿ ಸಂಖ್ಯೆ.*ನಂ.111/2023*</u>

**ಫಿರ್ಯಾಧಿದಾರಃ** ಸರಕಾರದ ಪರವಾಗಿ ಸುಲೇಪೇಟ ಪೋಲಿಸ ಠಾಣೆ

// ವಿರುದ್ದ //

**ಆರೋಪಿ: ಮಾರುತಿ**

<u>ಆ ರೋ ಪ ಣೆ</u>

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಈ ಕೆಳಕಂಡ ಆರೋಪಿತರು.

| | |
|---|---|
| | ಮಾರುತಿ ತಂದೆ ಶಾಣಪ್ಪ ಹಾಬಾಳ, 24 ವರ್ಷ,<br>ಉಃ ಕೂಲಿ, ವಾಸಃ ತೆಗಲತಿಪ್ಪಿ , ತಾಃ ಚಿಂಚೋಳಿ. |

**<u>ಆದ ನಿಮ್ಮ ವಿರುದ್ದ ದೋಷಿಸುವ ಆರೋಪಣೆ ಎನೆಂದರೆ,</u>**

ದಿನಾಂಕಃ 16-04-2019 ರಂದು 02-30 ಪಿ.ಎಮ್ ಸುಮಾರಿಗೆ ಸುಲೇಪೇಟ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಚಾಸಾ-1 ನೇದ್ದವರು ಗುಡ್ಸ ಆಟೋ ನಂಃ KA-32-B-8286 ನೇದ್ದರಲ್ಲಿ 12,000 ತತ್ತಿಗಳನಿಟ್ಟುಕೊಂಡು ಹಳ್ಳಿಗಳಿಗೆ ಹೋಗಿ ಮಾರಾಟ ಮಾಡಿ ಗಡಿಕೇಶ್ವರಾರದಿಂದ ಭಂಟನಳ್ಳಿ ಮಾರ್ಗವಾಗಿ ಹಾಜಿ ಸರ್ವರ ದರ್ಗಾದ ಮುಂದೆ ಇರುವ ಬ್ರಿಜ್ ಹತ್ತಿರ ಬರುತ್ತಿದ್ದಾಗ ಆರೋಪಿ ನೀನು ಮೋಟಾರ ಸೈಲ ಚೇಸ್ಸಿ ನಂಃ 06EACC06624 ರನ್ನು ಗುಡ್ಸ ಆಟೋಕ್ಕೆ ಸೈಡ ಹೊಡೆದು ಮುಂದೆ ನಡು ರೋಡಿಗೆ ಮೋಟಾರ ಸೈಕಲ ನಿಲ್ಲಿಸಿ ಚಾಸಾ-1 ನೇದ್ದವರಿಗೆ ಹೆದರಿಸಿ ಆತನ ಹತ್ತಿರ ಬ್ಯಾಗಿನಲ್ಲಿದ್ದ ಹಣ 10,025/- ರೂ ಮತ್ತು ಅಂದಾಜು 15,000/- ರೂ ಕಿಮ್ಮತ್ತಿನ ಒಂದು ಮೊಬೈಲನ್ನು ದರೋಡೆ ಮಾಡಿದ್ದರಿಂದ,

ಈ ಮೂಲಕ ಭಾ.ದಂ.ಸಂ.ಕಲಂ.392 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ

ದಿನಾಂಕಃ 18.08.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
C/c ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.